ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-೧

ಸಂಖ್ಯೆ: ಸಿ8(4)ದಾಖಲಾತಿ.01/2001-02

ದಿನಾಂಕ: 21-01-2002

# ಸುತ್ತೋಲೆ

ವಿಷಯ: ರಾಜ್ಯದಲ್ಲಿರುವ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಶಾಲೆಗಳು ವಿಧಿಸುವ ಶುಲ್ಕವನ್ನು ನಿಯಂತ್ರಿಸುವ ಬಗ್ಗೆ.

-----------

ರಾಜ್ಯದ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 18556/99 ಶ್ರೀ ಕೆ.ಎನ್. ಸುಬ್ಬಾರೆಡ್ಡಿ ಮತ್ತು ಕರ್ನಾಟಕ ರಾಜ್ಯ, ಪ್ರಕರಣದಲ್ಲಿ ರಾಜ್ಯದಲ್ಲಿ ಡೊನೇಷನ್ ಹಾವಳಿಯನ್ನು ನಿಯಂತ್ರಿಸಲು ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಪಾರದರ್ಶಕ ಮಾಡಲು ಶಾಲೆಗಳಲ್ಲಿ ವಿಧಿಸುವ ಶುಲ್ಕವನ್ನು ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದೆ.

ಈ ಹಿನ್ನೆಲೆಯಲ್ಲಿ ಈ ಸುತ್ತೋಲೆಯನ್ನು ಹೊರಡಿಸಲಾಗಿದೆ ಹಾಗೂ ಸಂಬಂಧಿಸಿದ ಮಾನ್ಯತೆ ಪಡೆದ ಖಾಸಗಿ ಶಾಲೆಗಳು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಮಟ್ಟದ ಅಧಿಕಾರಿಗಳು ಈ ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಆದೇಶಿಸಿದೆ. ಆಡಳಿತ ಮಂಡಳಿಗಳು ನಿಗದಿತ ದಿನಾಂಕಕ್ಕೆ ಮೊದಲೇ ದಾಖಲಾತಿ ಪ್ರಕ್ರಿಯೆ ಪ್ರಾರಂಭಿಸಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ.

1) ಎಲ್ಲಾ ಶಾಲೆಗಳೂ ದಾಖಲಾತಿ ಪ್ರಕ್ರಿಯೆಯನ್ನು ಏಪ್ರಿಲ್ / ಮೇ ತಿಂಗಳಿನಲ್ಲೇ ನಡೆಸತಕ್ಕದ್ದು, ಕರ್ನಾಟಕ ಶಿಕ್ಷಣ ಮಸೂದೆಯಡಿ Karnataka Eduction Institutions (Classification, Regulation and prescription of curricular) Rule 195. ನಿಯಮ 13 ಮತ್ತು 14 ಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಏಪ್ರಿಲ್‌ಗಿಂತ ಮುಂಚೆ ದಾಖಲಾತಿ ಮಾಡಿಕೊಳ್ಳುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಶಿಕ್ಷಣ ಮಸೂದೆ ಸೆಕ್ಷನ್ ೩೯ರಂತೆ ಮಾನ್ಯತೆ ಹಿಂದಕ್ಕೆ ಪಡೆಯಲು ಕ್ರಮವನ್ನು ಸಂಬಂಧಿಸಿದ ಪ್ರಾಧಿಕಾರಿಗಳು ಕಡ್ಡಾಯವಾಗಿ ಜರುಗಿಸಬೇಕು. ಜಿಲ್ಲಾ ಉಪ ನಿರ್ದೇಶಕರುಗಳು ಈ ಬಗ್ಗೆ ಶಾಲೆಗಳಿಗೆ ಸುತ್ತೋಲೆಯನ್ನು ಕಳುಹಿಸಿ, ದಾಖಲಾತಿ ಪ್ರಕ್ರಿಯೆ ಏಪ್ರಿಲ್‌ನಿಂದ ಪ್ರಾರಂಭವಾಗುವ ಹಾಗೆ ನೋಡಿಕೊಳ್ಳಬೇಕು. ಈ ಬಗ್ಗೆ ಸುದ್ದಿ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡಬೇಕು.

2) ಪ್ರತಿಯೊಂದು ಖಾಸಗಿ ಅನುದಾನಿತ / ಅನುದಾನರಹಿತ ಶಾಲೆಗಳು ಏಪ್ರಿಲ್ 1 ರಂದು ದಾಖಲಾತಿ ಪ್ರಕ್ರಿಯೆ ಕ್ಯಾಲೆಂಡರ್ ಪ್ರಕಟಿಸಬೇಕು ಮತ್ತು ಪೋಷಕರು ಏಪ್ರಿಲ್ ನಂತರವೇ ಮಕ್ಕಳ ದಾಖಲಾತಿ ಮಾಡಿಸಲು ಉಪ ನಿರ್ದೇಶಕರು ವ್ಯಾಪಕ ಪ್ರಚಾರ ನೀಡಬೇಕು.

3) ಸಾರ್ವಜನಿಕರಿಂದ, ಪೋಷಕರಿಂದ ಬರುವ ಅಹವಾಲುಗಳು/ದೂರುಗಳನ್ನು ಪರಿಶೀಲಿಸಿ, ಪರಿಹಾರವನ್ನು ನೀಡಲು ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಅಥಾರಿಟಿಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯನ್ನು ರಚಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ ಇ.ಡಿ.೭೧ ವಿವಿದ ೯೭ ದಿ.೮.೧೦.೯೯ ರಲ್ಲಿ ತಿಳಿಸಿರುವಂತೆ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸಿಕೊಳ್ಳಬೇಕು. ಸಾರ್ವಜನಿಕರು ದಾಖಲಾತಿ ಹಾಗೂ ವಂತಿಗೆಗೆ ಸಂಬಂಧಿಸಿದ ದೂರುಗಳನ್ನು ಈ ಸಮಿತಿಗೆ ಆಯಾ ಜಿಲ್ಲಾ ಉಪ ನಿರ್ದೇಶಕರು, ಸಾ.ಶಿ.ಇ., ಇವರ ವಿಳಾಸಕ್ಕೆ ಕಳುಹಿಸಬಹುದು. ಸದರಿ ಸಮಿತಿಯು ಈ ದೂರುಗಳನ್ನು ಪರಿಶೀಲಿಸಿ ತುರ್ತು ಕ್ರಮ ಕೈಗೊಳ್ಳುತ್ತಿರಬೇಕು.

4) ಪ್ರತಿಯೊಂದು ಜಿಲ್ಲೆಯಲ್ಲೂ ಉಪ ನಿರ್ದೇಶಕರು ಸಹಾಯ ವೇದಿಕೆ ನಿರ್ಮಿಸಿ ಓರ್ವ ಶಿಕ್ಷಣಾಧಿಕಾರಿಯ ಉಸ್ತುವಾರಿಗೆ ವಹಿಸಬೇಕು. ಪೋಷಕರಿಗೆ ಸೂಕ್ತ ಸಲಹೆ ನೀಡಲು ಕ್ರಮಕೈಗೊಳ್ಳಬೇಕು.

5) ಈ ಮೇಲಿನ ಆದೇಶಗಳನ್ನು ಸೂಕ್ತ ರೀತಿಯಲ್ಲಿ ಪಾಲಿಸಲು ಜಿಲ್ಲಾ ಉಪ ನಿರ್ದೇಶಕರು ಜಿಲ್ಲೆಯಲ್ಲಿರುವ ಎಲ್ಲಾ ಮಾನ್ಯತೆ ಪಡೆದ ಅನುದಾನಿತ/ಅನುದಾನರಹಿತ ಶಾಲೆಗಳ ಮುಖ್ಯಸ್ಥರ ಸಭೆಯನ್ನು ಜಿಲ್ಲಾ/ತಾಲ್ಲೂಕ್ ಮಟ್ಟದಲ್ಲಿ ಕರೆದು ದಾಖಲಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರುವ ಬಗ್ಗೆ ಡೊನೇಷನ್ ಹಾವಳಿಯನ್ನು ತಡೆಯಲು ತೆಗೆದುಕೊಂಡ ಕ್ರಮಗಳು ಶಾಲಾ ಶುಲ್ಕವನ್ನು ನಿಯಂತ್ರಿಸಲು ಈಗಾಗಲೇ ಹೊರಡಿಸಿರುವ ಸುತ್ತೋಲೆಗಳು ಇವುಗಳನ್ನು ಅವರ ಗಮನಕ್ಕೆ ತಂದು ಮುಂದಿನ ವರ್ಷ ಸಾರ್ವಜನಿಕರಿಂದ /ಪೋಷಕರಿಂದ ಶಾಲೆಗಳ ಮೇಲೆ ಯಾವುದೇ ದೂರು ಬರದಂತೆ ದಾಖಲಾತಿ ಪ್ರಕ್ರಿಯೆ ನಡೆಸುವ ಬಗ್ಗೆ ತಿಳುವಳಿಕೆ ನೀಡಬೇಕು.

6) ಎಲ್ಲಾ ಶಾಲೆಗಳೂ ತಾವು ವಿಧಿಸುವ ಶುಲ್ಕವನ್ನು ಪೋಷಕರ ಮಾಹಿತಿಗಾಗಿ ಶಾಲಾ ನೋಟೀಸ್ ಬೋರ್ಡಿನಲ್ಲಿ ಹಾಗೂ ಅರ್ಜಿ ಫಾರಂಗಳಲ್ಲಿ ನಮೂದಿಸಬೇಕು.

(೧) ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿಧಿಸುವ ಶುಲ್ಕಗಳನ್ನು ಮಾತ್ರ ಪಡೆಯಬೇಕು ಇದಲ್ಲದೆ ಶಿಕ್ಷಣ ಸಂಹಿತೆಯಡಿಯಲ್ಲಿನ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಲಾಸಿಫಿಕೇಷನ್ ರಿಜಿಸ್ಟ್ರೇಷನ್ ಮತ್ತು ಪ್ರಿಸ್‌ಕ್ರಿಪ್ಷನ್ ಆಫ್ ಕರಿಕ್ಯುಲಾ) ನಿಯಮ ೧೯೯೫ರ ನಿಯಮ ೧೦ರಂತೆ ರೂ ೫೦೦ನ್ನು ಅಭಿವೃದ್ಧಿ ಶುಲ್ಕ ಪಡೆಯಬಹುದು.

(೨) ಶಾಶ್ವತ ಅನುದಾನ ರಹಿತ ಶಾಲೆಗಳಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ ೩೯ ವಿವಿಧ ೯೯ ದಿ: ೧೪-೩-೨೦೦೦ದ ಕಂಡಿಕೆ ೪ರಂತೆ ಶಾಲಾ ಶುಲ್ಕವನ್ನು ವಿಧಿಸಬಹುದು. ಹಾಗೂ ಅಭಿವೃದ್ಧಿ ಶುಲ್ಕವನ್ನು ರೂ ೬೦೦ಕ್ಕೆ ಮೀರದಂತೆ ವಿಧಿಸಬಹುದು. ಅಧಿಸೂಚನೆ ದಿನಾಂಕ: ೧೪-೩-೨೦೦೦ದ ಕಂಡಿಕೆ ೪ ಕೆಳಕಂಡಂತೆ ಇದೆ.

**" Fees in unaided Private Education Institution"**

1. Notwithstanding anything contained in any rules made in this behalf, and in lieu of tuition fee charges under Rule 10(2)(b)(ii) of the Karnataka Education Institutions (Classification, Regulation Prescription of Curricula etc.,) Rules 1995 the maximum tuition fee in respect of Private Unaided Educational Institutions shall be fixed taking into consideration the Salary Expenditure on teaching and non-teaching staff plus 30% of the Salary expenditure towards contingency and maintenance Costs divided by total number of Students.

Provided that the Salary expenditure includes contribution towards Provident Fund by the management, encasement benefit LTC/HTC benefits, medical allowance, conveyance allowance, if any, given to the staff of the institution.

Provided further that the total number of students for calculation of the quantum of fees shall be the actual number of students on roll at the end of the previous academic year and the sanctioned intake in respect of approved additional sections, if any, for the ensuing year, namely the year for which the fees is being notified.

And Provided further that the above fees, shall be collected by the management in addition to the Special Development Fees and Term Fees stipulated in the Karnataka Education Institution (Classification, Regulation and Prescription of Curricula) Rules 1995.

(2) Salary expenditure shall be as per the audited account of the management subject to the limitation of pay scales prescribed by Govt. as well as the prescribed staffing pattern and it has to be cross verified with reference to Acquattance Roll, Bank Account of the employee and Attendance Register.

(3) I.C.S.E and C.B.S.E ಮಾನ್ಯತೆ ಪಡೆದ ಶಾಲೆಗಳು ಕರ್ನಾಟಕ ಎಜ್ಯುಕೇಷನಲ್ ಇನ್ಸ್‌ಟಿಟ್ಯೂಷನ್ಸ್ (ಪ್ರೊಹಿಬಿಷನ್ ಆಫ್ ಕ್ಯಾಪಿಟೇಷನ್ ಫೀ) ಆಕ್ಟ್ ೧೯೮೪ರ ವ್ಯಾಪ್ತಿಯಲ್ಲಿ ಬರುತ್ತಿದ್ದು ಅಧಿನಿಯಮ ಮೂರರಂತೆ ಕ್ಯಾಪಿಟೇಷನ್ ಶುಲ್ಕ ನಿಷೇಧಿಸಿದೆ.

ಸರ್ಕಾರ ಆಗಾಗ್ಗೆ ವಿಧಿಸಿರುವ ಶುಲ್ಕವನ್ನಲ್ಲದೆ ಬೇರಾವ ರೂಪದಲ್ಲಿ ಶುಲ್ಕವನ್ನಾಗಲಿ ಅಥವಾ ದೇಣಿಗೆಯನ್ನಾಗಲಿ ನಿಷೇಧಿಸಲಾಗಿದೆ.

ಆಯುಕ್ತರು.

ಗೆ,

1) ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ ಈ ಕುರಿತು ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಸುತ್ತೋಲೆ ನೀಡುವುದು ಹಾಗೂ ಎಲ್ಲಾ ಶಿಕ್ಷಣಾಧಿಕಾರಿಗಳಿಗೆ ಇದರಂತೆ ಕ್ರಮಕೈಗೊಳ್ಳಲು ತಿಳಿಸುವುದು.
2) ರಾಜ್ಯದಲ್ಲಿನ ವಿಭಾಗೀಯ ಸಹ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.

ghs\\Type_6\d\Est 2\17276.doc